# ಭಲಾರೆ ರಿಯಾಸ್!

■ ಪ್ರವೀಣ ಕುಲಕರ್ಣಿ



ಜಾಗತಿಕ ವೇದಿಕೆಗಳಲ್ಲಿ ಪ್ರಜ್ವಲವಾಗಿ ಬೆಳಗುತ್ತಿರುವ ಭಾರತೀಯ ಯುವ ಪ್ರತಿಭೆಗಳ ಪಟ್ಟಿ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ವರ್ಷಾಂತ್ಯದಲ್ಲಿ 'ಟೈಮ್' ಪತ್ರಿಕೆಯ ಮುಖಪುಟದಲ್ಲಿ ಭಾರತೀಯ ಮೂಲದ ಅಮೆರಿಕನ್ ಹುಡುಗಿ ಗೀತಾಂಜಲಿ ರಾವ್ ರಾರಾಜಿಸಿದರೆ, ಹೊಸ ವರ್ಷದ ಆರಂಭದಲ್ಲಿ ಜಗತ್ತಿನ ಗಮನ ಸೆಳೆದಿದ್ದಾನೆ – ತಮಿಳುನಾಡು ರಾಜ್ಯದ ತಂಜಾವೂರಿನ ಹುಡುಗ ರಿಯಾಸ್‌ದೀನ್ ಶಂಸುದ್ದೀನ್! ಜಗತ್ತಿನಲ್ಲೇ ಅತ್ಯಂತ ಹಗುರವಾದ ಉಪಗ್ರಹ ಶೋಧಿಸಿರುವ ಈತನೀಗ 'ನಾಸಾ' ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ವಿಜೇತ.

ತಂಜಾವೂರಿನಲ್ಲಿರುವ ಶಾಸ್ತ್ರ ಡೀಮ್ಡ್ ಯೂನಿವರ್ಸಿಟಿಯ ವಿದ್ಯಾರ್ಥಿ ರಿಯಾಸ್‌ದೀನ್, ಮೆಕ್ಯಾಟ್ರಾನಿಕ್ಸ್ ಎಂಜಿನಿಯರಿಂಗ್ ಓದುತ್ತಿದ್ದಾನೆ. ಆತ ಅಭಿವೃದ್ಧಿಪಡಿಸಿರುವ ಎರಡು ಹಗುರ ಉಪಗ್ರಹಗಳಿಗೆ 'ವಿಷನ್ ಸ್ಯಾಟ್ ವಿ1' ಹಾಗೂ 'ವಿಷನ್ ಸ್ಯಾಟ್ ವಿ2' ಎಂದು ಹೆಸರಿಸಲಾಗಿದೆ. ಈ ಪುಟಾಣಿ ಉಪಗ್ರಹಗಳು, ಒಂದೇ ಬಣ್ಣದ ಕ್ಯೂಬ್‌ಗಳನ್ನು ಒಂದೆಡೆ ಸೇರಿಸುವ ಆಟದ 'ರೂಬಿಕ್ ಕ್ಯೂಬ್' ಆಟಿಕೆಯಂತೆ ಗೋಚರಿಸುತ್ತವೆ. ಇವುಗಳ ತೂಕ ತಲಾ 33 ಗ್ರಾಂ ಇದ್ದರೆ, ಗಾತ್ರ 37 ಮಿ.ಮೀ!

ನಾಸಾ ಆಯೋಜಿಸಿದ್ದ ಸ್ಪರ್ಧೆಯ ಸ್ವರೂಪ ಕೂಡ ಹಾಗೆಯೇ ಇತ್ತು. ಹೀಗಾಗಿ ಈ ಸ್ಪರ್ಧೆಗೆ ಅದು ಕೊಟ್ಟಿದ್ದ ಹೆಸರು 'ಕ್ಯೂಬ್ಸ್ ಇನ್ ಸ್ಪೇಸ್' ಎಂಬುದಾಗಿತ್ತು. ನೂರು ಗ್ರಾಂ ತೂಕದೊಳಗೆ ಉಪಗ್ರಹವನ್ನು ರೂಪಿಸಬೇಕು ಎನ್ನುವ ಷರತ್ತನ್ನೂ ಅದು ವಿಧಿಸಿತ್ತು. ಜಗತ್ತಿನ 73 ದೇಶಗಳ ಸಾವಿರಾರು ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಎಲ್ಲರನ್ನೂ ಮೀರಿನಿಂತು ಗೆಲುವಿನ ನಗೆ ಬೀರಿರುವ ರಿಯಾಸ್‌ದೀನ್, ಬಾಹ್ಯಾಕಾಶಕ್ಕೆ ಸಂಬಂಧಿಸಿದ ಸಂಶೋಧನೆಗಳ ವಿಷಯದಲ್ಲಿ ಭಾರತೀಯರ ಸಾಧನೆ ತುಂಬಾ ಎತ್ತರದ್ದು ಎಂಬುದನ್ನು ಮತ್ತೊಮ್ಮೆ ನಿರೂಪಿಸಿದ್ದಾನೆ.

ವರ್ಜಿನಿಯಾದಲ್ಲಿರುವ ವ್ಯಾಲಪ್ಸ್ ಫ್ಲೈಟ್ ಫೆಸಿಲಿಟಿ ಕೇಂದ್ರದಿಂದ 'ವಿಷನ್ ಸ್ಯಾಟ್ ವಿ1' ಉಪಗ್ರಹವನ್ನು ನಾಸಾ ಮುಂದಿನ ವರ್ಷ ಜೂನ್‌ನಲ್ಲಿ ಉಡಾವಣೆ ಮಾಡಲಿದೆ. 'ವಿಷನ್ ಸ್ಯಾಟ್ ವಿ2' ಅನ್ನು ಆಗಸ್ಟ್‌ನಲ್ಲಿ ಉಡಾವಣೆ ಮಾಡುವುದಾಗಿ ಪ್ರಕಟಿಸಿದೆ. ಈ ಉಪಗ್ರಹಗಳ ನೈಜ ಸಾಮರ್ಥ್ಯ ಉಡಾವಣೆಯ ಬಳಿಕವೇ ಅಗ್ನಿಪರೀಕ್ಷೆಗೆ ಒಳಗಾಗಲಿದೆ. ಅಂದಹಾಗೆ, ಚೆನ್ನೈನ ಐಎನ್‌ಆರ್‌ಒ ಲ್ಯಾಬ್ಸ್ ಸಂಸ್ಥೆಯ ಸಹಯೋಗದಲ್ಲಿ ಅಭಿವೃದ್ಧಿಪಡಿಸಿದ್ದ ಉಪಗ್ರಹವೇ ಈವರೆಗೆ ಜಗತ್ತಿನ ಅತ್ಯಂತ ಹಗುರ ಎಂಬ ಹೆಗ್ಗಳಿಕೆಯನ್ನು ಹೊಂದಿತ್ತು. ಅದರ ತೂಕ 64 ಗ್ರಾಂ ಇತ್ತು. ರಿಯಾಸ್‌ದೀನ್‌ನ ಸಾಧನೆ ನೋಡಿ, ಆತನ ಎರಡೂ ಉಪಗ್ರಹಗಳ ಒಟ್ಟು ತೂಕ ಕೇವಲ 66 ಗ್ರಾಂ!

ತಂಜಾವೂರು ಜಿಲ್ಲೆಯ ಕರಂಡೈ (ಕಾಂಚಿಪುರಂ ಪಟ್ಟಣಕ್ಕೆ ತುಂಬಾ ಹತ್ತಿರದಲ್ಲಿದೆ) ಎಂಬ ಗ್ರಾಮದ ಈ ಹುಡುಗ ಆವೆಮಣ್ಣಿನ ಆಟಿಕೆಗಳನ್ನು ಹಿಡಿದು ಆಟವಾಡಿದರೂ ಬೆಳೆಯುತ್ತಾ ಹೋದಂತೆ ಆತನ ಕಣ್ಣು ನೆಟ್ಟಿದ್ದು ಬಾನಂಗಳದಲ್ಲಿ. ನಾಸಾ ಹಾಗೂ ಇಸ್ರೊ ಯೋಜನೆಗಳ ಕುರಿತು ಆತನಿಗೆ ತೀವ್ರ ಕುತೂಹಲ. ಶ್ರೀಹರಿಕೋಟಾದಲ್ಲಿ ಯಾವುದಾದರೂ ಉಪಗ್ರಹ ಉಡಾವಣೆ ಇದೆ ಎಂದರೆ ಟಿ.ವಿ. ಮುಂದೆ ಪ್ರತಿಷ್ಠಾಪನೆ ಆಗಿಬಿಡುತ್ತಿದ್ದನಂತೆ. ಆ ಮಟ್ಟಿಗಿನ ಕುತೂಹಲ ಆತನನ್ನು ಈ ಹಂತಕ್ಕೆ ತಂದು ನಿಲ್ಲಿಸಿದೆ.

ಉಪಗ್ರಹದ ಸಂಕೀರ್ಣ ಸಾಧನಗಳನ್ನು ಚಿನ್ನ ಇಲ್ಲವೇ ಟೈಟಾನಿಯಂನಿಂದ ತಯಾರಿಸುವುದು ಸದ್ಯದ ರೂಢಿ. ಆದರೆ, ರಿಯಾಸ್‌ದೀನ್ ಆ ಸಾಧನಗಳನ್ನು ಪಾಲಿಥಿರಿಮೈಡ್ ಥರ್ಮೋಪ್ಲಾಸ್ಟಿಕ್‌ನಿಂದ ತಯಾರು ಮಾಡಿದ್ದಾನೆ. ಆತನ ಈ ಸಂಶೋಧನೆ ಏನಾದರೂ ಯಶ ಗಳಿಸಿದಲ್ಲಿ ಉಪಗ್ರಹ ನಿರ್ಮಾಣ ವೆಚ್ಚ ಇನ್ನಷ್ಟು ತಗ್ಗಲಿದೆ.

ಶಾಸ್ತ್ರ ಡೀಮ್ಡ್ ಯೂನಿವರ್ಸಿಟಿ ಕೂಡ ತನ್ನ ಈ ಹೆಮ್ಮೆಯ ವಿದ್ಯಾರ್ಥಿಯ ಸಾಧನೆಗೆ ಸಂಭ್ರಮಪಟ್ಟಿದೆ. ರಿಯಾಸ್‌ದೀನ್‌ಗೆ ಸ್ಟಾರ್ಟ್‌ಅಪ್ ಶುರುಮಾಡಲು ಐದು ಲಕ್ಷ ರೂಪಾಯಿ ನೆರವು ನೀಡುವುದಾಗಿ ಕುಲಪತಿ ಎಸ್. ವೈದ್ಯಸುಬ್ರಹ್ಮಣ್ಯಂ ಪ್ರಕಟಿಸಿದ್ದಾರೆ.

ಗ್ರಾಮಾಂತರ ಭಾಗದಿಂದ, ಅದರಲ್ಲೂ ಬಡ–ಮಧ್ಯಮ ವರ್ಗಗಳ ಕುಟುಂಬದ ಹಿನ್ನೆಲೆ ಹೊಂದಿದ ಪ್ರತಿಭೆಗಳನ್ನು ಪೋಷಿಸಲು ಇಂತಹ ಪ್ರೋತ್ಸಾಹದ ಕ್ರಮಗಳು ಹೆಚ್ಚಬೇಕು. ಹಾಗಾದಾಗ ಮಾತ್ರ ಪ್ರತಿಭೆಗಳು ಸೂರ್ಯನಂತೆ ಪ್ರಖರವಾಗಿ ಬೆಳಗಬಲ್ಲವು. ಇಲ್ಲದಿದ್ದರೆ ಗ್ರಹಣ ಹಿಡಿದ ಸೂರ್ಯನಂತೆ ಆ ಬೆಳಕು ಕತ್ತಲಲ್ಲೇ ಉಳಿದೀತು. ಭಾರತದಲ್ಲಿ ಯುವ ಪ್ರತಿಭೆಗಳನ್ನು ಹುಡುಕಲು ಏನೇನೋ ಯೋಜನೆಗಳು ಇವೆ. ದುರಂತವೆಂದರೆ ನಮ್ಮ ಶಾಲಾ ಮಕ್ಕಳಿಗೆ, ಅದರಲ್ಲೂ ಗ್ರಾಮೀಣ ಭಾಗದ ಪ್ರತಿಭೆಗಳಿಗೆ, ಅವುಗಳ ಕುರಿತು ಸೂಕ್ತ ಮಾಹಿತಿಯೇ ಇಲ್ಲ. ಕೇಂದ್ರ ಸರ್ಕಾರದಿಂದ ಪ್ರತಿವರ್ಷ ಕೆವಿಪಿವೈ ಪರೀಕ್ಷೆಯನ್ನೂ ನಡೆಸಲಾಗುತ್ತದೆ. ಅದರಲ್ಲಿ ಉನ್ನತಶ್ರೇಣಿಯಲ್ಲಿ ತೇರ್ಗಡೆಯಾದವರಿಗೆ ವ್ಯಾಸಂಗದ ಉದ್ದಕ್ಕೂ ದೊಡ್ಡಪ್ರಮಾಣದ ಶಿಷ್ಯವೇತನ ಸಿಗುವುದಲ್ಲದೆ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಧ್ಯಯನಕ್ಕೂ ಅವಕಾಶದ ಬಾಗಿಲು ತೆರೆಯುತ್ತದೆ. ಮಕ್ಕಳಿಗೆ ಈ ಕುರಿತು ಪರಿಪೂರ್ಣ ಮಾಹಿತಿ ಕೊಡಬೇಕು. ರಿಯಾಸ್‌ದೀನ್ ಅವರಂತಹ ಪ್ರತಿಭೆಗಳ ಸಾಧನೆಯನ್ನೇ ಅಂತಹ ಮಾಹಿತಿ ಆಂದೋಲನಕ್ಕೆ ಸಾಧನವನ್ನಾಗಿ ಮಾಡಿಕೊಳ್ಳಬೇಕು. ■